**All India Radio: Bangalore**
**National Bulletin In Kannada**
**06.06.2025 1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಜಮ್ಮು ಕಾಶ್ಮೀರದಲ್ಲಿ ವಿಶ್ವದ ಅತೀ ಎತ್ತರದ ಚೆನಾಬ್ ರೈಲ್ವೆ ಸೇತುವೆ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಜಿ
2. ರೆಪೋ ದರವನ್ನು ೫೦ ಮೂಲಾಂಶ ಕಡಿತದೊಂದಿಗೆ ೫.೫ ಕ್ಕೆ ಇಳಿಸಿದ ಆರ್‌ಬಿಐ
3. ಎನ್‌ಡಿಎ ಮೈತ್ರಿಕೂಟದ ಆಡಳಿತಕ್ಕೆ ೧೧ ವರ್ಷ; ಯುವಜನತೆಯ ಕೊಡುಗೆ ಶ್ಲಾಘಿಸಿದ ಪ್ರಧಾನಿ
4. ೧೧ ವರ್ಷಗಳಲ್ಲಿ ೧೦ ಸಾವಿರ ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಸ್ಥಾಪನೆ - ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್
5. ಬೆಂಗಳೂರು ಕಾಲ್ತುಳಿತ ಪ್ರಕರಣ: ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ, ಡಿಎನ್‌ಎ ಸಿಬ್ಬಂದಿ ಸೇರಿದಂತೆ ನಾಲ್ವರ ಬಂಧನ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ್ದು, ವಿಶ್ವದ ಅತಿ ಎತ್ತರದ ರೈಲ್ವೆ ಕಮಾನು ಸೇತುವೆಯಾದ ಚೇನಾಬ್ ಸೇತುವೆ ಮತ್ತು ಭಾರತದ ಮೊದಲ ಕೇಬಲ್-ಸ್ಟೇಡ್ ರೈಲು ಸೇತುವೆಯಾದ ಅಂಜಿ ಸೇತುವೆಯನ್ನು ಸಹ ಪ್ರಧಾನಿ ಉದ್ಘಾಟಿಸಿದರು. ಈ ಯೋಜನೆಯು ಕಾಶ್ಮೀರ ಕಣಿವೆ ಮತ್ತು ದೇಶದ ಉಳಿದ ಭಾಗಗಳ ನಡುವೆ ಸರ್ವಋತು, ತಡೆರಹಿತ ರೈಲು ಸಂಪರ್ಕವನ್ನು ಸ್ಥಾಪಿಸುತ್ತದೆ, ಇದು ಪ್ರಾದೇಶಿಕ ಚಲನಶೀಲತೆಯನ್ನು ಪರಿವರ್ತಿಸುವ ಮತ್ತು ಸಾಮಾಜಿಕ-ಆರ್ಥಿಕ ಏಕೀಕರಣವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಬಳಿಕ ಪ್ರಧಾನಿ ಸೇತುವೆ ನಿರ್ಮಾಣದಲ್ಲಿ ಕೊಡುಗೆ ನೀಡಿದ ಇಂಜಿನೀಯರ್‌ಗಳು ಹಾಗೂ ಕೌಶಲ್ಯಶೀಲ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ಪ್ರವಾಸದ ಭಾಗವಾಗಿ ಪ್ರಧಾನಿ, ಕಟ್ರಾದಿಂದ ಶ್ರೀನಗರದವರೆಗೆ ಹಾಗೂ ಶ್ರೀನಗರದಿಂದ ಕಟ್ರಾಗೆ ಸಂಚರಿಸುವ ಎರಡು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರಿದರು. ಕತ್ರಾದಲ್ಲಿಂದು ಪ್ರಧಾನಿ ೪೬ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿ, ಕೆಲವು ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸುವ ಕಾರ್ಯಕ್ರಮ ಪ್ರಗತಿಯಲ್ಲಿದೆ. ಇದರ ಭಾಗವಾಗಿ ಪ್ರಧಾನಿ, ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ.. ೨೭೨ ಕಿಲೋಮೀಟರ್ ಉದ್ದದ ಈ ಯೋಜನೆಯನ್ನು ಸುಮಾರು ೪೪ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಯೋಜನೆಯು ಸಂಪೂರ್ಣ ವಿದ್ಯುದ್ದೀಕರಣಗೊಂಡ ವಿಭಾಗವಾಗಿದ್ದು, ೩೬ ಸುರಂಗಗಳು ಮತ್ತು ೯೪೩ ಸೇತುವೆಗಳನ್ನು ಒಳಗೊಂಡಿದೆ.

<><><><>

ಭಾರತೀಯ ರಿಸರ್ವ್ ಬ್ಯಾಂಕ್ ಆರ್ಥಿಕ ನೀತಿ ಸಮಿತಿ ಇಂದು ಮಹತ್ವದ ತೀರ್ಮಾನ ತೆಗೆದುಕೊಂಡಿದ್ದು, ರೆಪೋ ದರವನ್ನು ೫೦ ಮೂಲಾಂಶ ಕಡಿತಗೊಳಿಸಿ ೬ ರಿಂದ ೫.೫ ಕ್ಕೆ ಇಳಿಸಿದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಘೋಷಿಸಿದ್ದಾರೆ. ಮೂರು ದಿನಗಳಿಂದ ನಡೆಯುತ್ತಿದ್ದ ಆರ್ಥಿಕ ನೀತಿ ಸಮಿತಿ - ಎಂಪಿಸಿಯ ಸಭೆಯ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಆರ್ಥಿಕ ವರ್ಷ ೨೦೨೫-೨೬ಕ್ಕೆ ಹಣದುಬ್ಬರ ದರವನ್ನು ಶೇಕಡ ೪ ರಿಂದ ಶೇಕಡ ೩.೭ಕ್ಕೆ ಇಳಿಸಲಾಗಿದೆ.

ಆರ್‌ಬಿಐ ಪ್ರಸಕ್ತ ಆರ್ಥಿಕ ವರ್ಷಕ್ಕೆ ದೇಶದ ಮೂಲ ಜಿಡಿಪಿ ಬೆಳವಣಿಗೆ ದರವನ್ನು ಶೇಕಡ ೬.೫ ರಷ್ಟು ಇರಲಿದೆ ಎಂದು ಅಂದಾಜಿಸಿದ್ದು, ಇದನ್ನು ಹಿಂದಿನ ಮುನ್ನೋಟದಂತೆಯೇ ಉಳಿಸಲಾಗಿದೆ ಎಂದು ತಿಳಿಸಿದರು.

ಭಾರತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದು, ಬಾಹ್ಯ ಹಾಗೂ ಆಂತರಿಕ ಹೂಡಿಕೆದಾರರಿಗೆ ಆಕರ್ಷಕ ಅವಕಾಶಗಳನ್ನು ನೀಡುತ್ತಿದೆ. ರೈತರ ಬೆಳೆಗೆ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗಿದ್ದು, ಆಹಾರದ ಬೆಲೆ ಸ್ಥಿರವಾಗಲಿದೆ ಎಂದು ಭರವಸೆ ವ್ಯಕ್ತಪಡಿಸಲಾಗಿದೆ.

<><><><>

ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ೧೧ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತದ ಯುವಕರು ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡಿರುವ ಕುರಿತು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಸಂದೇಶದಲ್ಲಿ ಅವರು, ಭಾರತೀಯ ಯುವ ಶಕ್ತಿಯನ್ನು ಉತ್ಸಾಹ, ಹೊಸದಾಗಿ ಆಲೋಚಿಸುವ ಶಕ್ತಿ ಮತ್ತು ದೃಢ ಸಂಕಲ್ಪದ ಪ್ರತೀಕ ಎಂದು ಬಣ್ಣಿಸಿದ್ದಾರೆ. ಹಿಂದಿನ ೧೧ ವರ್ಷಗಳಲ್ಲಿ ದೇಶವು ಎಲ್ಲಾ ಕ್ಷೇತ್ರಗಳಲ್ಲಿ ಅನಿರೀಕ್ಷಿತ ಸಾಧನೆಗಳನ್ನು ಯುವಜನತೆ ಕೊಡುಗೆಯ ಮೂಲಕ ಕಂಡಿದೆ. ನವೋದ್ಯಮ, ವಿಜ್ಞಾನ, ಕ್ರೀಡೆ, ಸಮುದಾಯ ಸೇವೆ, ಸಂಸ್ಕೃತಿ ಮತ್ತಿತರ ಕ್ಷೇತ್ರಗಳಲ್ಲಿ ಅವರು ಅಸಾಧ್ಯವನ್ನು ಸಾಧ್ಯವಾಗಿಸಿದ್ದಾರೆ,' ಎಂದು ಪ್ರಧಾನಿ ಮೋದಿ ಹೇಳಿದರು.

<><><><>

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಗರೀಬ್ ಕಲ್ಯಾಣ್ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, ಭಾರತದ ನಾಗರಿಕತೆಯನ್ನು ಪುನರುಜ್ಜೀವನಗೊಳಿಸಲು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಕುರಿತ ಒಂದು ವರದಿ ಇಲ್ಲಿದೆ.

**ವರದಿ:**

ಕಳೆದ ದಶಕದಲ್ಲಿ, ಪರಂಪರೆಯಲ್ಲಿ ಶ್ರೀಮಂತ, ಅಭಿವ್ಯಕ್ತಿಯಲ್ಲಿ ವೈವಿಧ್ಯಮಯ, ಮತ್ತು ಜಾಗತಿಕ ತಲುಪಿನಲ್ಲೂ ಆತ್ಮವಿಶ್ವಾಸದಿಂದ ಕೂಡಿರುವ ಭಾರತವನ್ನು ನಿರ್ಮಿಸಿದ ನಿಜವಾದ ರಾಷ್ಟ್ರ ನಿರ್ಮಾತೃಗಳನ್ನು ಗೌರವಿಸುವ ದೃಷ್ಟಿಯಿಂದ ಸರ್ಕಾರ ಮಹತ್ವಪೂರ್ಣ ಹೆಜ್ಜೆಗಳನ್ನು ಇಟ್ಟಿದೆ. ದೇಶದ ಸ್ವಾತಂತ್ರ್ಯದ ೭೫ನೇ ವರ್ಷದ ಸಂಭ್ರಮವಾಗಿ ಆಯೋಜಿಸಲಾದ "ಆಜಾದಿ ಕಾ ಅಮೃತ ಮಹೋತ್ಸವದಂತಹ ಅಭಿಯಾನದಡಿ ದೇಶದ ತ್ಯಾಗ ಹಾಗೂ ಸಾಧನೆಗಳನ್ನು ಸಾಂಸ್ಕೃತಿಕ ಮತ್ತು ದೇಶಭಕ್ತಿಯ ಕಾರ್ಯಕ್ರಮಗಳ ಮೂಲಕ ದೇಶಾದ್ಯಾಂತ ಆಚರಿಸಲಾಯಿತು. ಅನೇಕ ವರ್ಷಗಳಿಂದ ಬಾಕಿ ಇದ್ದ ಸ್ಮಾರಕಗಳು, ಉದಾಹರಣೆಗೆ ಪ್ರಧಾನ ಮಂತ್ರಿ ಸಂಗ್ರಹಾಲಯ, ನ್ಯಾಷನಲ್ ಪೊಲೀಸ್ ಸ್ಮಾರಕ, ಗಿರಿಜನ ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯಗಳು, ಭಾರತ ಮಂಡಪಂ ಮತ್ತು ಹೊಸ ಸಂಸತ್ ಭವನವನ್ನು ರಾಷ್ಟ್ರ ಏಕತೆಯ ಪ್ರತೀಕಗಳಾಗಿ ರೂಪಾಂತರಿಸಲಾಗಿದೆ. 'ಏಕ ಭಾರತ್, ಶ್ರೇಷ್ಠ ಭಾರತ್" ಉಪಕ್ರಮದಡಿಯಲ್ಲಿ ಕಾಶಿ-ತಮಿಳ್ ಸಂಗಮಂ ಮತ್ತು ೬೬ ಕೋಟಿ ಭಕ್ತರ ಭಾರೀ ಭಾಗವಹಿಸುವಿಕೆಯೊಂದಿಗೆ ನಡೆದ ಮಹಾಕುಂಭ ೨೦೨೫ ಕಾರ್ಯಕ್ರಮಗಳು "ಏಕತೆಯಲ್ಲಿ ವೈವಿಧ್ಯತೆ"ಯನ್ನು ಉತ್ಸವದಂತೆ ಆಚರಿಸಿವೆ. ಈ ನಡುವೆಯೇ ಬೌದ್ಧ ಸಮ್ಮೇಳನ, ಸಿಖ್ ಗುರುಗಳ ಪ್ರಕಾಶ್ ಪರ್ವ್ ಮುಂತಾದ ಜಾಗತಿಕ ಕಾರ್ಯಕ್ರಮಗಳು ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಮತ್ತಷ್ಟು ಬಲಪಡಿಸಿವೆ. ೨೦೨೪ರಲ್ಲಿ ೨೨ ಕೋಟಿ ಜನರ ಭಾಗವಹಣೆಯೊಂದಿಗೆ ಹೊಸ

ಜಾಗತಿಕ ದಾಖಲೆಯೊಂದಿಗೆ ಯೋಗ ಜಾಗತಿಕ ಚಳವಳಿಯಾಗಿ ಬದಲಾಗಿದ್ದು, ಭಾರತ ಆರೋಗ್ಯದ ಜಾಗತಿಕ ಧ್ವನಿಯಾಗಿ ಬೆಳೆಯುತ್ತಿದೆ. ಆಯುರ್ವೇದದ ಜಾಗತಿಕ ವಿಸ್ತರಣೆಯಲ್ಲೂ ಅಭಿವೃದ್ಧಿ ಕಂಡುಬಂದಿದ್ದು, ಈವರೆಗೆ ೨೪ ರಾಷ್ಟ್ರಮಟ್ಟದ, ೪೮ ಸಂಸ್ಥೆಮಟ್ಟದ ಒಪ್ಪಂದಗಳು, ೧೫ ಶೈಕ್ಷಣಿಕ ಸಂಸ್ಥೆಗಳು ಹಾಗೂ ೩೫ ದೇಶಗಳ ೩೯ ಸ್ಥಳಗಳಲ್ಲಿ ಆಯುಷ್ ಮಾಹಿತಿ ಕೇಂದ್ರಗಳ ಸ್ಥಾಪನೆ ಮೂಲಕ ಸಾಧನೆಯ ಹಾದಿಯಲ್ಲಿ ಸಾಗುತ್ತಿದೆ. ಕೇಂದ್ರದ ಯುಷ್ ವೀಸಾ, ಮತ್ತು ಹೀಲ್ ಇಂಡಿಯಾ ಉಪಕ್ರಮಗಳು ಭಾರತವನ್ನು ವಿಶ್ವದ ಆಯುರ್ವೇದ ಮತ್ತು ಪಾರಂಪಾರಿಕ ವೈದ್ಯಕೀಯ ಪ್ರವಾಸೋದ್ಯಮದ ಕೇಂದ್ರವಾಗಿ ರೂಪಿಸುತ್ತಿವೆ. ಇತ್ತೀಚೆಗೆ ಯುನೆಸ್ಕೋ ಪರಂಪರೆ ಸ್ಥಳಗಳ ಪಟ್ಟಿಯಲ್ಲಿ ಅಸ್ಸಾಂನ ಅಹೋಮ್ ವಂಶದ ಮೊಯಿದಾಂಗಳ ಸೇರ್ಪಡೆ ಯುನೆಸ್ಕೋ ಪರಂಪರೆ ಸ್ಥಳಗಳ ಪಟ್ಟಿಯಲ್ಲಿರುವ ಭಾರತದ ಪಾರಂಪಾರಿಕ ಸ್ಥಳಗಳ ಸಂಖ್ಯೆ ೪೩ಕ್ಕೆ ಏರಿದೆ. ಈ ಮೂಲಕ ಜಾಗತಿಕ ಪರಂಪರೆ ಸಂರಕ್ಷಣೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸಿದೆ. ಹಬ್ಬಗಳು, ಯೋಗ, ಸಂಗೀತ, ಹಾಗೂ ಕಲೆಗಳಿಂದ ಹಿಡಿದು, ನಮ್ಮ ಸಂಸ್ಕೃತಿ ಇಂದು ಅನೇಕ ದೇಶಗಳಲ್ಲಿ ಗೌರವ ಪಡೆಯುತ್ತಿದೆ. ಇಂದಿನ ಭಾರತ ತನ್ನ ಶ್ರೀಮಂತ ಸಂಸ್ಕೃತಿಯನ್ನು ದೇಶದೊಳಗೆ ಮಾತ್ರವಲ್ಲದೆ, ಜಗತ್ತಿನಾದ್ಯಾಂತ ಬೆಳಕಿನಂತೆ ಹರಡುತ್ತಿದೆ.

<><><><>

ಕಳೆದ ೧೧ ವರ್ಷಗಳಲ್ಲಿ ದೇಶದಾದ್ಯಂತ ೧೦ ಸಾವಿರ ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಈ ಲ್ಯಾಬ್‌ಗಳು ನೀತಿ ಆಯೋಗದ ಅಟಲ್ ನಾವಿನ್ಯತಾ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಶಾಲಾ ಮಕ್ಕಳಲ್ಲಿ ಹೊಸ ಆಲೋಚನೆ ಹಾಗೂ ಆವಿಷ್ಕಾರದ ಮನೋಭಾವ ಬೆಳೆಸಿವೆ ಎಂದು ಹೇಳಿದ್ದಾರೆ.

<><><><>

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು -ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ಮತ್ತು ಡಿಎನ್‌ಎ ಕಾರ್ಯಕ್ರಮ ನಿರ್ವಹಣಾ ಕಂಪನಿ ಸಿಬ್ಬಂದಿ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಆರ್‌ಸಿಬಿಯ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ, ಡಿಎನ್‌ಎ ಈವೆಂಟ್ ಮ್ಯಾನೇಜ್‌ಮೆಂಟ್‌ನ ಸುನಿಲ್ ಮ್ಯಾಥ್ಯೂ, ಕಿರಣ್ ಮತ್ತು ಸುಮಂತ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಂಟಿ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ - ಕೆಎಸ್‌ಸಿಎ ಕಾರ್ಯದರ್ಶಿ ಶಂಕರ್ ಮತ್ತು ಕೆಎಸ್‌ಸಿಎ ಖಜಾಂಚಿ ಜಯರಾಮ್ ಅವರ ನಿವಾಸಗಳ ಮೇಲೂ ಪೊಲೀಸರು ದಾಳಿ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಕಬ್ಬನ್ ಪಾರ್ಕ್ ಪೊಲೀಸರ ಸಿಬ್ಬಂದಿ ಮತ್ತು ಕೇಂದ್ರ ಅಪರಾಧ ವಿಭಾಗದ - ಸಿಸಿಬಿ ವಿಶೇಷ ವಿಭಾಗ ಜಂಟಿ ಕಾರ್ಯಾಚರಣೆ ನಡೆಸಿದೆ. ಬಂಧಿತ ವ್ಯಕ್ತಿಗಳು ಮುಂಬೈಗೆ ತೆರಳುತ್ತಿದ್ದರು. ನಾಲ್ವರು ಆರೋಪಿಗಳನ್ನು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಕರೆತರಲಾಗಿದ್ದು, ಶೇಷಾದ್ರಿಪುರಂ ಸಹಾಯಕ ಪೊಲೀಸ್ ಆಯುಕ್ತರು ವಿಚಾರಣೆ ನಡೆಸುತ್ತಿದ್ದಾರೆ. ವಿಜಯೋತ್ಸವ ಮೆರವಣಿಗೆಗೆ ಅನುಮತಿ ನೀಡದ ನಂತರವೂ, ಸೋಸ್ಲೆ ಸಾಮಾಜಿಕ ಮಾಧ್ಯಮದಲ್ಲಿ ವಿಜಯೋತ್ಸವ ಮೆರವಣಿಗೆಯ ಕುರಿತು ಸಂದೇಶವನ್ನು ಪೋಸ್ಟ್ ಮಾಡಿ ನಂತರ ಅದನ್ನು ಅಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>